

ಹೇಮಾ ಪಟ್ಟಣಶೆಟ್ಟಿ

# ನಂಬುವುದನ್ನು ಬರೆಯುತ್ತೇನೆ, ಬರೆದುದನ್ನು ಆಚರಿಸುತ್ತೇನೆ...

ಭಾರತದ ಅತ್ಯುತ್ತಮ ಲೇಖಕಿಯರಲ್ಲಿ ಒಬ್ಬರಾದ ಪ್ರತಿಭಾ ರಾಯ್ (ಜನವರಿ 21, 1943), 'ಬರ್ಷ, ಬಸಂತ, ಬೈಶಾಖ' (1974) ಕಾದಂಬರಿಯ ಮೂಲಕ ಒಡಿಯಾ ಸಾಹಿತ್ಯವಲಯದಲ್ಲಿ ಮನೆಮಾತು. ಪ್ರದ್ಮಶ್ರೀ, ಪದ್ಮಭೂಷಣ ಪ್ರಶಸ್ತಿಗಳಿಂದ ಪುರಸ್ಕೃತರು. 25 ಕಾದಂಬರಿ, 24 ಕಥಾಸಂಕಲನ, 13 ಪ್ರವಾಸ ಕಥನ, 2 ಕಾವ್ಯ ಸಂಕಲನ, ಆತ್ಮಕಥೆ ಸೇರಿದಂತೆ ಮಕ್ಕಳಿಗಾಗಿಯೂ ನವಸಾಕ್ಷರರಿಗಾಗಿಯೂ ಕೃತಿಗಳನ್ನು ರಚಿಸಿದ್ದಾರೆ. ಒಡಿಶಾದ ಕಟಕ್ ಜಿಲ್ಲೆಯ ಆಲಾಬೋಲ್ ಅವರ ತವರು. 'ಪ್ರೀತಿ ಮತ್ತು ನಿರ್ಭೀತಿ ಸಾಹಿತಿಯ ಮುಖ್ಯ ಗುಣವಾಗಿರಬೇಕು' ಎಂದು ನಂಬಿ ಹಾಗೇ ಬದುಕಿ, ಬರೆಯುತ್ತ ಬಾಳುತ್ತಿರುವವರು. 'ಜೀವನವೆಂಬುದು ಕಮಲಪತ್ರದ ಮೇಲಿನ ಪ್ರಚಂಡ ನೀರ ಹನಿ. ನಾನು ಕೇವಲ ಒಂದು ಪುಟ್ಟ ಹನಿ, ನಾನು ಸಾಗರವೂ ಅಲ್ಲ, ಮಹಾನ್ ಆತ್ಮವೂ ಅಲ್ಲ' ಎನ್ನುವ ಪ್ರತಿಭಾ ಅವರ ಸಾಹಿತ್ಯ ದಾರ್ಶನಿಕತೆ ಮತ್ತು ಅನುಭಾವದ ಸಮಪಾಕ. ಸಾಮಾಜಿಕ ಸಮಾನತೆ, ಜಾತಿ–ವರ್ಗ– ಲಿಂಗ ವ್ಯವಸ್ಥೆಯ ಶ್ರೇಣೀಕರಣದ ವಿರುದ್ಧ ತಮ್ಮ ಬರವಣಿಗೆಯಲ್ಲಿ ಪ್ರತಿರೋಧ ಹಾಗೂ ಜೀವನದಲ್ಲಿ ಗಟ್ಟಿಯಾದ ದನಿಯೆತ್ತಿದ್ದಾರೆ. ಏಕಾಕಿಯಾಗಿ ಹೋರಾಟ ನಡೆಸಿದ್ದಾರೆ. ನ್ಯಾಯಾಲಯದಲ್ಲೂ ಹೋರಾಡಿದ್ದಾರೆ. ಮೂರ್ತಿದೇವಿ ಪ್ರಶಸ್ತಿ ಪಡೆದ ಮೊದಲ ಮತ್ತು ಏಕಮಾತ್ರ ಬರಹಗಾರ್ತಿ ಪ್ರತಿಭಾ. ಇವರ 'ಯಾಜ್ಞಸೇನಿ' ಕಾದಂಬರಿಗೆ ಜ್ಞಾನಪೀಠ ಪುರಸ್ಕಾರ ಸಂದಿದೆ. ಆ ಕೃತಿ ಈವರೆಗೆ ಒಡಿಯಾದಲ್ಲಿ ನೂರಕ್ಕೂ ಹೆಚ್ಚು ಮುದ್ರಣಗಳನ್ನು ಕಂಡಿದೆ, ಮೂವತ್ತಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದಗೊಂಡಿದೆ. ದೇಶದ ಈ ಹೆಮ್ಮೆಯ ಬರಹಗಾರ್ತಿಯೊಂದಿಗೆ 'ಮಯೂರ'ಕ್ಕಾಗಿ ನಡೆಸಿದ ಮಾತುಕತೆಯ ಸಂಗ್ರಹರೂಪ ಇಲ್ಲಿದೆ.

